ಹೇಗೆ? ಮುಖ್ಯವಾದ ಬಿಲ್‌ಗಳು ಹಾಗೂ ಕಾರ್ಯಕ್ರಮಗಳು ಇರುವುದರಿಂದ, ಇಂತಹ ಪ್ರಶ್ನೆಗಳಿಗೆ ಬರಹ ಮೂಲಕ ಬೇಕಾದರೆ ಮಾಹಿತಿ ಕೊಡುತ್ತೇನೆ. ಮಾನ್ಯ ಸದಸ್ಯರು ಬಾಯಿ ಮೂಲಕ ಉತ್ತರವನ್ನು ಕೇಳಿದರೆ ಹಾಗೆಯೇ ಉತ್ತರವನ್ನು ಕೊಡುತ್ತೇನೆ. ಹೀಗೆ ಸುಮ್ಮನೆ ಸಭೆಯಲ್ಲಿ ಕಾಲವನ್ನು ಕಳೆಯುವುದು ಎಷ್ಟರಮಟ್ಟಿಗೆ ಇದು ಸರಿಯಾಗಿದೆ. ಇದರ ಬಗ್ಗೆ ನನಗೆ ಕೆಲವು ದಿನಗಳಿಂದ ವಿಷಾದವೆನಿಸುತ್ತದೆ. ಇದರಲ್ಲಿ ಏನು ಗುಟ್ಟು ಮತ್ತು ರಹಸ್ಯಗಳಿಲ್ಲ, ಅದನ್ನು ಮಾಡುತ್ತಿದ್ದೇವೆ. ಆಡಳಿತಾತ್ಮಕವಾಗಿ ಕೆಲವು ದಿನಗಳು ಬೇಕಾಗುತ್ತದೆ. ಅದನ್ನು ಇಷ್ಟರೊಳಗಾಗಿ ಮಾಡಿಕೊಡುತ್ತೇವೆ.

ಶ್ರೀ ಸಿ. ಬೈರೇಗೌಡ (ವೇಮಗಲ್) :— ಈ ಸದನದಲ್ಲಿ ನಡೆಯುವಂತಹ ಕಲಾಪಗಳ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇಂತಹ ವಿಚಾರಗಳನ್ನು ಸದನದಲ್ಲಿ ಪ್ರಸ್ತಾಪ ಮಾಡಬಹುದೆ? ಮತ್ತೆ ಇದನ್ನು ಪ್ರಸ್ತಾಪ ಮಾಡಿದ ತಕ್ಷಣ ಮಂತ್ರಿಗಳು ಉತ್ತರವನ್ನು ಕೋಡಬೇಕೆ? ಎಂದು ಕೇಳಿದರು. ಆ ಸದನದಲ್ಲಿ ಇಂತಹ ವಿಚಾರಗಳು ಇವತ್ತು ಪ್ರಸ್ತಾಪವಾಗುತ್ತಿಲ್ಲ, ಇದು ಈ ವಿಧಾನಸಭೆಯಲ್ಲಿಯೇ ಅಲ್ಲ, ಕಳೆದ ವಿಧಾನಸಭೆಯ ಅಧಿವೇಶನದಲ್ಲಿ ಅದಕ್ಕಿಂತಲೂ ಹಿಂದಿನಿಂದ ಈ ವಿಚಾರಗಳು ಪ್ರಸ್ತಾಪವಾಗಿವೆ. ಇದಕ್ಕೆ ಸರ್ಕಾರದವರು ಉತ್ತರವನ್ನು ಕೊಟ್ಟಿರುವುದು ಸಹ ಬಂದಿದೆ ಅದು ಸರಿಯಾಗಿದೆಯೋ ಅಥವಾ ತಪ್ಪಾಗಿದೆಯೋ ಎಂಬುದನ್ನು ತೀರ್ಮಾನ ಮಾಡುವುದು ತಮಗೆ ಬಿಟ್ಟಿರುವಂತಹ ವಿಚಾರವಾಗಿದೆ. ಆದರೆ ನಾನು ನಿನ್ನೆಯ ದಿವಸ ಈ ವಿಚಾರ ಪ್ರಸ್ತಾಪ ಮಾಡಿದಾಗ, ನಾಳೆಯ ದಿವಸ ಮಂತ್ರಿಗಳು ಸದನದಲ್ಲಿದ್ದಂತಹ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದರೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆಂದು ಮಾನ್ಯ ಸಭಾಧ್ಯಕ್ಷರು ಹೇಳಿದರು. ಅದ್ದರಿಂದ ನಾನು ಇವತ್ತಿನ ದಿವಸ ಪ್ರಸ್ತಾಪವನ್ನು ಮಾಡಿದೆ ಬಹುಶ: ಅದರ ಹಿನ್ನಲೆಯ ಬಗ್ಗೆ ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲವೆಂದು ನಾನಂತೂ ಭಾವಿಸಿದ್ದೇನೆ. ಹೊಸದಾಗಿ ಇಲ್ಲಿ ಏನು ಒಂದು ರಚನೆಯನ್ನು ಮಾಡುತ್ತಿದ್ದೇವೆ, ಹೊಸ ಸಂಪ್ರದಾಯವನ್ನು ಹಾಕುತ್ತಿದ್ದೇವೆ ಅದನ್ನು ಬರುವಂತಹ ರೀತಿಯಲ್ಲಿ ಮಾನ್ಯ ಮಂತ್ರಿಗಳು ಮಾತನಾಡುವುದರಲ್ಲಿ ಅರ್ಥವಿಲ್ಲವೆಂದು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

(ಅ) ಗ್ರಾಮೀಣ ಪ್ರದೇಶದ ಮಕ್ಕಳಿಗೆ ಕೊಡುತ್ತಿದ್ದಂತಹ ಸವಲತ್ತುಗಳನ್ನು ಕಾನೂನಿನಿಂದ ಆದಂತಹ ತೊಂದರೆಯಿಂದಾಗಿ ನಿಲ್ಲಿಸಿರುವುದು.

+ ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ) :— ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ಸಬ್‌ಮಿಷನ್ ಇದೆ. ಅದೇನೆಂದರೆ, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಕೊಡುತ್ತಿದ್ದಂತಹ ಸವಲತ್ತುಗಳನ್ನು ಕಾನೂನಿನಿಂದ ಆದಂತಹ ತೊಂದರೆಯಿಂದಾಗಿ ನಿಲ್ಲಿಸಿ ಬಹಳ ದಿನಗಳಾಗಿದೆ. ಬಹುಶ: ಈ ಸದನದಲ್ಲಿರುವಂತಹ ನನ್ನ ಎಲ್ಲಾ ಸ್ನೇಹಿತರೂ ಕೂಡ ಇದರ ಬಗ್ಗೆ ಜರೂರು ಅಗತ್ಯವನ್ನು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ.

ಬೇರೆ ಯಾವ ಬಿಲ್ಲು ಬಾಕಿಯನ್ನು ನೀವು ಎಲ್ಲಿಯಾದರೂ ಬಿಸಾಕಿ, ಗ್ರಾಮೀಣ ಮಕ್ಕಳಿಗೆ ಮೀಸಲಾತಿಯನ್ನು ಕೊಡಬೇಕಾದಂತಹ ವಿಧೇಯಕವನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೋರಿಕೊಳ್ಳುತ್ತೇನೆ. ಸರ್ಕಾರ ಮತ್ತು ನನ್ನ ಸದಸ್ಯ ಮಿತ್ರರುಗಳು ಇದಕ್ಕೆ ಸಹಕಾರವನ್ನು ಕೊಡಬೇಕೆಂದು ಕೋರಿಕೊಳ್ಳುತ್ತೇನೆ. ಮೊದಲು ಆ ವಿಧೇಯಕವನ್ನು ತೆಗೆದುಕೊಳ್ಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಆ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದ್ದೇನೆ, ಅದು ಈಗ ಕನ್ಸಿಡರೇಷನ್‌ಗೆ ಬಂದಿದೆ, ತಾವು ಯಾವಾಗ ಅನುಮತಿಯನ್ನು ಕೊಡುತ್ತೀರೋ ಆಗ ಆ ಬಿಲ್ಲನ್ನು ಮಂಡಿಸುವುದಕ್ಕೆ ನಾವು ಸಿದ್ಧವಾಗಿದ್ದೇವೆ.

ಶ್ರೀ ವೈ.ಕೆ. ರಾಮಯ್ಯ :— ಈಗಾಗಲೇ ಸಾಕಷ್ಟು ದಿವಸಗಳಿಂದ ಅನ್ಯಾಯವಾಗಿದೆ, ನಮಗೆ ನ್ಯಾಯವಾಗಿ ಸಿಗಬೇಕಾಗಿರುವಂತಹ ಸೌಲಭ್ಯಗಳನ್ನು ಕಿತ್ತುಕೊಂಡಂತಹ ವ್ಯವಸ್ಥೆಯಲ್ಲಿ ನಾವುಗಳು ಸಿಕ್ಕಿಕೊಂಡು ಒದ್ದಾಡಿ, ಸಾಕಷ್ಟು ಅನ್ಯಾಯವಾಗಿದೆ. ಮುಂದೆ ಈ ರೀತಿಯಾಗಿ ಅನ್ಯಾಯವಾಗುವುದು ಬೇಡ, ದಯಮಾಡಿ ಆ ಬಿಲ್ಲನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೋರಿಕೊಳ್ಳುತ್ತೇನೆ.

ಶ್ರೀ ಎ. ರಾಮದಾಸ್ :— ಆ ಬಿಲ್ಲನ್ನು ತರುವುದರಲ್ಲಿ ನಮ್ಮ ಪೂರ್ಣವಾದ ಸಹಕಾರವಿದೆ. ನಾವು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸೂಚನೆ ಕೊಟ್ಟಿದ್ದೆವು ಮತ್ತು ತಾವು ನಮಗೆ ಮಾತನಾಡಲು ಕರೆಯಲಿ ಎಂದು ಕಾಯುತ್ತಾ ಕುಳಿತಿದ್ದೇವೆ. ನಾವುಗಳು ಕಾಯುತ್ತಾ ಕುಳಿತಿರುವವರು ಹಾಗೇ ಕುಳಿತಿರಬೇಕು. ಸುಮೋಟೋ ಆಗಿ ಯಾರ್ಯಾರೋ ಯಾವುದೋ ಪ್ರಶ್ನೆಗಳನ್ನು ಶೂನ್ಯವೇಳೆಯಲ್ಲಿ ಕೇಳಬಹುದಾದರೆ ಹೇಗೆ? ನಮ್ಮ ಪಕ್ಷದ ಸದಸ್ಯರುಗಳು ಕಾಯುತ್ತಾ ಕುಳಿತಿರುವವರನ್ನು ತಾವು ಸ್ವಲ್ಪ ಗಮನಿಸಬೇಕು. ತಮ್ಮ ಆದೇಶಕ್ಕೋಸ್ಕರವಾಗಿ ನಾವು ಕಾಯುತ್ತಾ ಕುಳಿತಿದ್ದೇವೆ. ಮಾನ್ಯ ರಾಮಯ್ಯನವರು ಪ್ರಸ್ತಾಪ ಮಾಡಿರುವಂತಹ ವಿಚಾರಕ್ಕೆ ನಮ್ಮಗಳ ಒಪ್ಪಿಗೆ ಇದೆ. ಆ ದೃಷ್ಟಿಯಿಂದ ಶೂನ್ಯವೇಳೆ ಸಾಯಂಕಾಲ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ, ನಾವುಗಳು ಒಪ್ಪಿಕೊಂಡು ಕುಳಿತಿದ್ದೇವೆ. ಮೊದಲು ಗ್ರಾಮೀಣ ಪ್ರದೇಶದಲ್ಲಿರುವಂತವರಿಗೆ ಆದ್ಯತೆಯನ್ನು ಕೊಡಬೇಕೆ ಅದಕ್ಕೋಸ್ಕರ ನಾವು ಕುಳಿತಿದ್ದೇವೆ. ಆದರೆ ಸುಮೋಟೋ ಮಾತನಾಡುವುದಾದರೆ ವ್ಯವಸ್ಥೆ ಹೀಗಿರುವುದಾದರೆ ನಮಗೂ ಅಲೋ ಮಾಡಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ನಾವು ಲಿಖಿತ ಮೂಲಕವಾಗಿ ಪ್ರಶ್ನೆಯನ್ನು ಕೇಳಿದ್ದರೂ ಕೂಡ ನಮಗೆ ಉತ್ತರ ಬಂದಿಲ್ಲ, ಕಾರಣವೇನು?

ಶ್ರೀ ಕೆ.ಬಿ. ಕೋಳಿವಾಡ :— ಮಾನ್ಯ ಉಪಾಧ್ಯಕ್ಷರೆ, ಸದನದಲ್ಲಿ ಏನು ನಡೆಯಯುತ್ತಿದೆ ಎಂಬುದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ನಾನು ಕಳೆದ 30 ವರ್ಷಗಳಿಂದ ಸದನದ ವ್ಯವಹಾರಗಳನ್ನು ನೋಡಿಕೊಂಡು ಬಂದಿದ್ದೇವೆ. ಪ್ರಶ್ನೋತ್ತರ ವೇಳೆ ಮುಗಿದಿದೆಯೇ? ಅದು ಗೊತ್ತಿಲ್ಲ, ಶೂನ್ಯವೇಳೆಯನ್ನು ತೆಗೆದುಕೊಂಡಿದ್ದೀರಾ? ಅದೂ ಗೊತ್ತಿಲ್ಲ. ಯಾರೋ ಎದ್ದುನಿಂತುಕೊಂಡು ಮನಸ್ಸಿಗೆ ಬಂದಂತೆ ಏನೋ ವಿಷಯವನ್ನು ತೆಗೆದುಕೊಂಡು ಮಾತನಾಡಿದರೆ ಹೇಗೆ ಸದನವನ್ನು ನಡೆಸುತ್ತೀರಿ? ಇದು ನನಗೆ ಅರ್ಥವಾಗುತ್ತಿಲ್ಲ.

ಉಪಾಧ್ಯಕ್ಷರು :— ಈಗ ಪ್ರಶ್ನೋತ್ತರ ವೇಳೆ ಮುಗಿದಿದೆ. ಶೂನ್ಯವೇಳೆಯನ್ನು ಮಧ್ಯಾಹ್ನ ತೆಗೆದುಕೊಳ್ಳುತ್ತೇನೆ. ಈಗ ಶೂನ್ಯವೇಳೆ ಇಲ್ಲ, ಈಗ ನಾನು ಒಂದು ವಿಷಯವನ್ನು ಹೇಳುತ್ತೇನೆ, ಆಮೇಲೆ ಡಾ. ರಾಜ್‌ಕುಮಾರ್‌ರವರ ವಿಷಯದ ಬಗ್ಗೆ ಚರ್ಚೆಯು ನಡೆಯುತ್ತದೆ.

(3) ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಉಪಾಧ್ಯಕ್ಷರು :— ಈಗ ಕಾರ್ಯದರ್ಶಿಯವರು ವಿಧಾನಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಧಿಕೃತವಾಗಿ ಅಂಗೀಕೃತವಾದ ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ವಿಧೇಯಕ 2000 ಇದನ್ನು ಸಭೆಯ ಮುಂದಿಡುವುದು.

ಕಾರ್ಯದರ್ಶಿ :— ಸನ್ಮಾನ್ಯ ಉಪಾಧ್ಯಕ್ಷರೆ, ವಿಧಾನಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ವಿಧೇಯಕ, 2000 ಇದನ್ನು ಸಭೆಯ ಮುಂದಿಡುತ್ತೇನೆ. - **ಅನುಬಂಧ - (೧)**

(4) ಪ್ರಕಟಣೆ

ಉಪಾಧ್ಯಕ್ಷರು :— ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶಗಳು ಬಂದಿರುತ್ತವೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ : 21-11-2000ರಂದು ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1) ಕರ್ನಾಟಕ ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ, 2000

2) ಕರ್ನಾಟಕ ಕಾನೂನುಗಳನ್ನು ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ, 2000

3) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ ತಿದ್ದುಪಡಿ ವಿಧೇಯಕ, 2000

—